International Journal of Kannada Research
www.kannadajournal.com

ISSN: 2454–5813
IJKR 2019; 5(2): 64-67
© 2019 IJKR
www.kannadajournal.com
Received: 04-02-2019
Accepted: 06-03-2019

**ಡಾ. ಯರ್ರಿಸ್ವಾಮಿ**
ಸಹಾಯಕ ಪ್ರಾಧ್ಯಾಪಕ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬,
ಹೊಸಪೇಟೆ ತಾಲೂಕು
ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ

**Correspondence**
**ಡಾ. ಯರ್ರಿಸ್ವಾಮಿ**
ಸಹಾಯಕ ಪ್ರಾಧ್ಯಾಪಕ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬,
ಹೊಸಪೇಟೆ ತಾಲೂಕು
ಬಳ್ಳಾರಿ ಜಿಲ್ಲೆ, ಕರ್ನಾಟಕ ರಾಜ್ಯ

# ಲಿಂಗವ್ಯವಸ್ಥೆ ಮತ್ತು ಜೀವನಾಧಾರ: ಸ್ತ್ರೀವಾದಿ ದೃಷ್ಟಿಕೋನ

**ಡಾ. ಯರ್ರಿಸ್ವಾಮಿ**

ಇತಿಹಾಸದ ವಿವಿಧ ಅವಧಿಗಳಲ್ಲಿ ಮುಖ್ಯವಾಹಿನಿ ಸಮಾಜದ ಒಳಗೆ ಸಾಮಾಜಿಕ ಸಮಸ್ಯೆಗಳು ಉದ್ಭವಿಸಿರುವುದನ್ನು ಕಾಣಬಹುದು. ಈ ಶೋಷಣೆಗೆ ಒಳಗಾದ ಸಾಮಾಜಿಕ ರಚನೆಗಳಾದ ಜನಾಂಗ, ವರ್ಗ ಹಾಗೂ ಜಂಡರ್‌ಗಳಿಗೆ ನ್ಯಾಯವನ್ನು ಪ್ರಬಲ ವಿಧಾನಗಳ ಮೂಲಕ ಅನುಷ್ಠಾನಗೊಳಿಸಿರುವುದನ್ನು ಕಾಣಬಹುದು. ಈ ವಾಸ್ತವವನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನವು ವಲಸೆ ಹಾಗೂ ಜೀವನಾಧಾರ ಸಮಸ್ಯೆಯ ಕುರಿತು ಜಂಡರ್ ವಿಶ್ಲೇಷಣೆಯನ್ನು ಸೈದ್ಧಾಂತಿಕ ವಿಧಾನದ ಮೂಲಕ ಅರಿತುಕೊಳ್ಳಲು ಬಯಸುತ್ತದೆ. ಆದಕಾರಣ ಈ ಅಧ್ಯಯನವು ಮಹಿಳೆಯರ ಅನುಭವಗಳನ್ನು ಮೂರು ಎಳೆಗಳನ್ನಾಗಿ ವರ್ಗೀಕರಿಸಿಕೊಂಡು ಕಟ್ಟಿಕೊಡುತ್ತದೆ. ಅವುಗಳೆಂದರೆ ಉದಾರ, ಸಮಾಜವಾದ ಮತ್ತು ತೀವ್ರಗಾಮಿ. ಈ ವಿಧಾನಗಳು ಸಾಮಾಜಿಕ ಸಿದ್ಧಾಂತಗಳ ದೃಷ್ಟಿಕೋನದೊಂದಿಗೆ ನಿಕಟ ಸಂಬಂಧ ಹೊಂದಿವೆ. ಉದಾರವಾದಿ ಸ್ತ್ರೀವಾದದ ಉದ್ದೇಶ ಮಾನವ ಬಂಡವಾಳ ಮತ್ತು ಆಧುನೀಕರಣ ಸಿದ್ಧಾಂತವನ್ನು ವಿಸ್ತರಿಸಿದರೆ, ಸಮಾಜವಾದಿ ಸ್ತ್ರೀವಾದವು ಸಂಘರ್ಷ ಮತ್ತು ಮಾರ್ಕ್ಸವಾದಿ ಸಿದ್ಧಾಂತದೊಂದಿಗೆ ಬೆಸೆದುಕೊಂಡಿದೆ. ತೀವ್ರಗಾಮಿ ಸ್ತ್ರೀವಾದವು ವಿಮೋಚನಾ ಸಿದ್ಧಾಂತದೊಂದಿಗೆ ಬೆಸೆದುಕೊಂಡಿದೆ.

ಹಿಂದಿನ ಶತಮಾನದಲ್ಲಿ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಜನಾಂಗಿಯ ಆಯಾಮಗಳನ್ನು ಒಳಗೊಳ್ಳಲು ಸ್ತ್ರೀವಾದಿ ವ್ಯಾಖ್ಯೆಯನ್ನು ವಿಸ್ತೃತಗೊಳಿಸಲಾಯಿತು. ಅಸಮಾನತೆಯ ಮೂಲಗಳ ಕುರಿತ ಸ್ತ್ರೀವಾದಿ ದೃಷ್ಟಿಕೋನಗಳಲ್ಲಿ ಭಿನ್ನತೆಗಳು ಇವೆ, ಹಾಗೆಯೇ ಹೇಗೆ ಸಮಾನತೆ ಹೊಂದಬೇಕು ಮತ್ತು ಯಾವ ಮಟ್ಟದಲ್ಲಿ ಜಂಡರ್ ಮತ್ತು ಜಂಡರ್ ಆಧಾರಿತ ಗುರುತಿಸುವಿಕೆಯನ್ನು ಪ್ರಶ್ನಿಸಬೇಕು ಹಾಗೂ ವಿಮರ್ಶಿಸಬೇಕು ಎನ್ನುವುದರ ಕುರಿತು ತಿಳಿಸುತ್ತದೆ. ಈ ವ್ಯಾಖ್ಯೆ ಹಾಗೂ ದೃಷ್ಟಿಕೋನಗಳಲ್ಲಿ ವ್ಯತ್ಯಾಸಗಳಿದ್ದರೂ, ಸ್ತ್ರೀವಾದಿ ಸಿದ್ಧಾಂತಗಳು ನಾಲ್ಕು ಪ್ರಮುಖವಾದ ವಿಚಾರಗಳ ಕುರಿತು ತಮ್ಮ ವಾದವನ್ನು ಮಂಡಿಸುತ್ತವೆ. ಮೊದಲನೆಯದಾಗಿ ಸಿದ್ಧಾಂತಗಳು ಪುರುಷ ಹಾಗೂ ಮಹಿಳೆಯರ ಸಿದ್ಧ ಮಾದರಿ ಸ್ವರೂಪವನ್ನು ಅರಿತುಕೊಳ್ಳುತ್ತದೆ. ಎರಡನೆಯದಾಗಿ ಎಲ್ಲಾ ವಿಧದ ಅಸಮಾನತೆಗೂ ಜಂಡರ್ ಸಂಬಂಧಗಳನ್ನು ಪ್ರಮುಖ ಸಮಸ್ಯೆಯಾಗಿ ಕಾಣಲಾಗಿದೆ; ಮೂರನೆಯದಾಗಿ ಜಂಡರ್ ಸಂಬಂಧಗಳನ್ನು ಐತಿಹಾಸಿಕ ಮತ್ತು ಸಾಮಾಜಿಕ–ಸಾಂಸ್ಕೃತಿಕ ಆಯಾಮದಿಂದ ಗ್ರಹಿಸಲಾಗಿದೆ. ನಾಲ್ಕನೆಯದಾಗಿ ಎಲ್ಲಾ ಸ್ತ್ರೀವಾದಿ ವಿಧಾನಗಳು ಸಾಮಾಜಿಕ ಬದಲಾವಣೆಯನ್ನು ಪ್ರತಿಪಾದಿಸುತ್ತವೆ.

ಈ ರೀತಿಯಾಗಿ ವಿಸ್ತೃತವಾದ ವ್ಯಾಖ್ಯಾನಗಳಿಂದ ಉಳಿದ ಸ್ತ್ರೀವಾದಿ ಸಿದ್ಧಾಂತಗಳಾದ ಕಪ್ಪು ಸ್ತ್ರೀವಾದ ಹಾಗೂ ಆಫ್ರಿಕನ್ ಸ್ತ್ರೀವಾದ, ಭಾರತದ ಸ್ತ್ರೀವಾದವು ಹುಟ್ಟಿಕೊಂಡಿತು. ಈ ಭಾಗವು ಉದಾರವಾದಿ ಸ್ತ್ರೀವಾದ, ಸಮಾಜವಾದಿ ಸ್ತ್ರೀವಾದ ಮತ್ತು ತೀವ್ರಗಾಮಿ ಸ್ತ್ರೀವಾದದ ಕುರಿತು ಸಂಕ್ಷಿಪ್ತ ಇಣುಕು ನೋಟವನ್ನು ನೀಡುತ್ತದೆ.

## ಉದಾರವಾದಿ ಸ್ತ್ರೀವಾದ:

ಉದಾರವಾದಿ ಸ್ತ್ರೀವಾದವು ಅತ್ಯಂತ ಹಳೆಯದಾದ ಬಹುಶಃ ಅತ್ಯಂತ ಸಾಂಪ್ರದಾಯಿಕವಾದ ಸ್ತ್ರೀವಾದ ದೃಷ್ಟಿಕೋನವಾಗಿದೆ. ೧೯೫೦ ಮತ್ತು ೧೯೬೦ರ ಮೊದಲನೆಯ ಸ್ತ್ರೀವಾದದ ಅಲೆಯ ಸಂದರ್ಭದಲ್ಲಿ ನಡೆದ ಹಲವು ನಾಗರೀಕ ಹಕ್ಕು ಚಳವಳಿಗಳ ಸಂದರ್ಭಗಳಲ್ಲಿ ಉದಾರವಾದಿ ಸ್ತ್ರೀವಾದವು ಅತ್ಯಂತ ಜನಪ್ರಿಯವಾಯಿತು. ಉದಾರವಾದದೊಂದಿಗೆ ಉದಾರವಾದಿ ಸ್ತ್ರೀವಾದದ ಉಗಮವಾಯಿತು. ಉದಾರವಾದ ಪ್ರತಿಯೊಬ್ಬ ವ್ಯಕ್ತಿಗೂ ಸ್ವ–ಹಿತಾಸಕ್ತಿಯನ್ನು ಕಾಯ್ದುಕೊಳ್ಳುವ ಹಕ್ಕುಂಟು ಅದಕ್ಕಾಗಿ ಸರ್ಕಾರ ಅವರನ್ನು ಬಲಪಡಿಸಬೇಕು ಎಂದು ಹೇಳುತ್ತದೆ, ಇದೇ ಅಂಶವನ್ನು ಮಹಿಳೆಯರಿಗೆ'

ಅನ್ವಯಿಸಿಕೊಂಡು ಉದಾರವಾದಿ ಸ್ತ್ರೀವಾದ ಬೆಳೆಯಿತು. ೧೯ ಮತ್ತು ೨೦ನೆಯ ಶತಮಾನದ ಅಂಚಿನಲ್ಲಿ ಉದಾರವಾದಿ ಸ್ತ್ರೀವಾದ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ೧೯೬೦ರ ದಶಕದಲ್ಲಿ ಪಶ್ಚಿಮದ ಮಹಿಳಾ ಚಳುವಳಿಯು ಇದಕ್ಕೆ ಮುಂದಾಳತ್ವವನ್ನು ವಹಿಸಿಕೊಂಡಿತು. ಸಮಾನತೆ, ಸ್ವಾತಂತ್ರ್ಯದ ಆದರ್ಶಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರಿ ಹಾಗೂ ಖಾಸಗಿ ಜೀವನದ ನಡುವಿನ ವ್ಯತ್ಯಾಸಕ್ಕೆ ಹೆಚ್ಚಿನ ಒತ್ತು ನೀಡಿತು.

ಉದಾರವಾದಿ ಸ್ತ್ರೀವಾದಿಗಳು ತಾರತಮ್ಯ ಮತ್ತು ರೂಢಿಗತಗೊಳಿಸುವಿಕೆಯು ಮಹಿಳೆಯರಿಗೆ ಜೀವನೋಪಾಯದ ಅವಕಾಶಗಳನ್ನು ಕಡಿಮೆಗೊಳಿಸಿತು ಮತ್ತು ಸಮಾಜ ಇತರ ಆಯಾಮಗಳನ್ನು ಕಡಿಮೆಗೊಳಿಸುತ್ತದೆ. ಈ ದೃಷ್ಟಿಕೋನವು ಮಹಿಳೆಯರು ತಮ್ಮ ಜೀವನದ ಪಥವನ್ನು ಆಯ್ದುಕೊಳ್ಳಲು ಸ್ವತಂತ್ರರು ಎನ್ನುವ ನಂಬಿಕೆಯನ್ನು ಹುಟ್ಟುಹಾಕುತ್ತದೆ ಮತ್ತು ಪಿತೃಪ್ರಧಾನ ಬಂಡವಾಳಶಾಹಿ ಸಮಾಜದಲ್ಲಿ ತಮ್ಮ ದಕ್ಷತೆಯನ್ನು ಸಾಧಿಸಲು ಅವಕಾಶ ಕಲ್ಪಿಸುತ್ತದೆ. ಆದ್ದರಿಂದ ಇದು ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಸಮಾನ ಹಕ್ಕುಗಳನ್ನು ಪ್ರತಿಪಾದಿಸುತ್ತದೆ. ಏಕೆಂದರೆ ಪ್ರತಿಯೊಬ್ಬ ಮಹಿಳೆಯೂ ಅಭಿವೃದ್ಧಿ ಪ್ರಕ್ರಿಯೆಯ ಲಾಭಕ್ಕೆ ಅರ್ಹಳು.

ಮಹಿಳೆ ಮತ್ತು ಪುರುಷರ ನಡುವೆ ಸಮಾನ ಅವಕಾಶಕ್ಕೆ ಒತ್ತು ನೀಡುತ್ತದೆ. ಮಹಿಳೆಯರ ಸಮಾನ ಹಕ್ಕುಗಳಿಗಾಗಿ ಹೋರಾಡುತ್ತದೆ. ಪುರುಷರಂತೆ ಮಹಿಳೆಯರು ಹೊರಗಿನ ದುಡಿಮೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ಪುರುಷರು ಮನೆ ಕೆಲಸದಲ್ಲಿ ಸಮಾನ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಅಥವಾ ಕುಟುಂಬದ ಜವಾಬ್ದಾರಿಗಳು ವೇತನ ನೀಡುವ ವೃತ್ತಿಗಳಾಗಬೇಕೆಂದು ಹೇಳುತ್ತದೆ. ಮಹಿಳೆಯರು ತಮ್ಮ ಸ್ಥಿತಿಯನ್ನು ತಾವೇ ಉತ್ತಮಪಡಿಸಿಕೊಳ್ಳಬೇಕು. ಮಹಿಳೆಯರು ಪುರುಷರ ವೃತ್ತಿಗಳನ್ನು ಉದಾ: ಕಾನೂನು, ಬ್ಯಾಂಕಿಂಗ್ ವ್ಯವಹಾರ, ಅರಕ್ಷಕ, ಸೈನ್ಯ, ತಾಂತ್ರಿಕ ಕ್ಷೇತ್ರಗಳನ್ನು ಪ್ರವೇಶಿಸಲು ಮತ್ತು ನಿರ್ಧಾರ ಕೈಗೊಳ್ಳುವ ಸ್ಥಾನಗಳನ್ನು ಪಡೆಯಲು ಪ್ರೋತ್ಸಾಹ ನೀಡುತ್ತದೆ. ವಿವಾಹದಷ್ಟೇ ವೃತ್ತಿಯು ಮುಖ್ಯವೆಂದು ಪರಿಗಣಿಸಬೇಕೆಂದು ಮಹಿಳೆಯರನ್ನು ಪ್ರೇರೆಪಿಸುತ್ತದೆ, ಸಾಮಾಜಿಕ ಮೌಲ್ಯಗಳ ಬದಲಾವಣೆಗಳು ಸುಧಾರಣಾವಾದಿ ಧೋರಣೆಗಳಿಂದ ಸಾಧ್ಯವೇ ಹೊರತು ಕ್ರಾಂತಿಕಾರಕ ಧೋರಣೆಗಳಿಂದ ಅಲ್ಲವೆನ್ನುತ್ತದೆ. ಈಗಿರುವ ಸಾಮಾಜಿಕ ವ್ಯವಸ್ಥೆಯಲ್ಲಿದ್ದುಕೊಂಡೇ ಕುಟುಂಬ ಹಾಗೂ ವೃತ್ತಿಗಳೆರಡನ್ನೂ ಹೊಂದಿಸಿಕೊಂಡು ಲಿಂಗ ಸಮಾನತೆಯನ್ನು ಪಡೆಯಲು ಪ್ರಯತ್ನಿಸಬೇಕು. ಮಹಿಳೆ ಸಹಜ ಪ್ರತಿಭೆ ಮತ್ತು ಸಾಮರ್ಥ್ಯ ಪುರುಷನಿಗೆ ಸಮನಾಗಿ ಬೆಳೆದಿಲ್ಲ ಎಂದರೆ ಅದಕ್ಕೆ ಕಾರಣ ಅವರ ಮೇಲೆ ಬಲವಂತವಾಗಿ ಹೇರಿರುವ ಕೌಟುಂಬಿಕ ಜವಾಬ್ದಾರಿ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಅವಳ ಭಾಗವಹಿಸುವಿಕೆಯನ್ನು ನಿರಾಕರಿಸಿರುವುದು. ಅವಳ ಪ್ರತಿಭೆ ಮತ್ತು ಸಾಮರ್ಥ್ಯಗಳ ಕೊರತೆಯಿಂದಲ್ಲ ಎನ್ನುತ್ತದೆ. ಈ ದೃಷ್ಟಿಕೋನದಿಂದಾಗಿ ಕಾನೂನು, ರಾಜಕೀಯ ಭಾಗವಹಿಸುವಿಕೆ, ಶಿಕ್ಷಣದಲ್ಲಿ ಹೆಣ್ಣುಮಕ್ಕಳ ದಾಖಲಾತಿಯನ್ನು ಹೆಚ್ಚಿಸಿತು. ಲಿಂಗಸಮಾನತೆಗೆ ಅಡ್ಡಿ ಬರುವ ಕಾಯಿದೆ ಕಾನೂನು, ಸಂಪ್ರದಾಯದ ಕಟ್ಟುಪಾಡುಗಳನ್ನು ತೊಡೆದು ಹಾಕಬೇಕೆಂದು ಹೇಳುತ್ತದೆ.

ಈಗಿರುವ ನಮ್ಮ ಸಮಾಜದ ಚೌಕಟ್ಟಿನಲ್ಲಿ ಸ್ತ್ರೀ–ಪುರುಷರ ನಡುವೆ ಅಸಮಾನತೆಯಿದೆ ಎಂದು ನಂಬಿದರು ಅದನ್ನು ಪ್ರಶ್ನಿಸುವುದಿಲ್ಲ. ಪುರುಷ ಪ್ರಧಾನತೆ ಕುರಿತು ಚರ್ಚಿಸುವುದಿಲ್ಲ. ಸಾಮಾಜಿಕ ರಚನೆಗಳನ್ನು ಆಕ್ಷೇಪಿಸುವುದಿಲ್ಲ. ಮಹಿಳೆಯರಲ್ಲಿ ತಾರತಮ್ಯ ತೋರುವಂತ ಸಂದರ್ಭದಲ್ಲಿ ಕೂಡ ಇದು ಏನನ್ನೂ ಹೇಳುವುದಿಲ್ಲ. ಉದಾ: ಮಹಿಳೆಯರಿಗೆ ಕಡಿಮೆ ಕೂಲಿ ಕೊಡುವ ಬಗ್ಗೆ ಅಥವಾ ವೇತನವಿಲ್ಲದೆ ಮನೆ ಒಡತಿಯರನ್ನಾಗಿಸುವ ಸಾಮಾಜಿಕ ರಚನೆ ಮತ್ತು ವ್ಯವಸ್ಥೆಯನ್ನು ಪ್ರಶ್ನಿಸುವುದಿಲ್ಲ. ಲಿಂಗ ಅಸಮಾನತೆ ತೋರುವ ಸಾಮಾಜಿಕ ಪರಂಪರೆ, ಸಂಪತ್ತು ಮತ್ತು ಅಧಿಕಾರ ಹಂಚಿಕೆ, ಕಾನೂನು ಪದ್ಧತಿ ಹಾಗೂ ಲೈಂಗಿಕತೆಗೆ ಸಂಬಂಧಿಸಿದ ನೀತಿನಿಯಮಗಳನ್ನು ವಿರೋಧಿಸುವುದಿಲ್ಲ. ಲಿಂಗ ಅಸಮಾನತೆಯನ್ನು ಹೋಗಲಾಡಿಸಬೇಕೆಂದು ಹೇಳಿದರೂ ಸ್ತ್ರೀ ಪುರುಷರ ನಡುವಿನ ವ್ಯತ್ಯಾಸವನ್ನು ಒಪ್ಪಿಕೊಳ್ಳುತ್ತದೆ. ಮಹಿಳೆಯರಲ್ಲಿನ ಭಿನ್ನಾಭಿಪ್ರಾಯಗಳಿಗೆ ಸ್ಪಂದಿಸುವುದಿಲ್ಲ. ಒಂದು ಗುಂಪಿಗೆ ಪರಿಹಾರ ಕಂಡು ಹಿಡಿದರೆ ಅದು ಬೇರೆ ಗುಂಪಿಗೂ ಉಪಯೋಗವಾಗುತ್ತದೆ ಎಂದು ಭಾವಿಸುತ್ತದೆ. ಅಸಮಾನತೆಯಿಂದ ಕೂಡಿದ ಲಿಂಗಾಧಾರಿತ ಸಂಬಂಧಗಳಿಗೆ ಕಾರಣಗಳನ್ನು ಹುಡುಕುವುದಿಲ್ಲ. ಕೇವಲ ಮುಂಜಾಗರೂಕ ಸುಧಾರಣೆಗಳನ್ನು ಅಳವಡಿಸಿಕೊಳ್ಳಲು ಹೇಳುತ್ತದೆ.

ಇದು ಪಿತೃಪ್ರಧಾನತೆ, ಅಧಿಕಾರ ಮತ್ತು ಮಹಿಳೆಯ ವ್ಯವಸ್ಥಿತ ಅಧೀನತೆಯನ್ನು ನಿರ್ಲಕ್ಷಿಸುತ್ತದೆ. ವರ್ಗ ಮತ್ತು ವರ್ಣದ ಪ್ರಭಾವವನ್ನು ಪರಿಗಣಿಸಿಲ್ಲ. ಸ್ಟಾಂಪ್ ಅವರು ಉದಾರವಾದಿ ಸ್ತ್ರೀವಾದದ ನ್ಯೂನ್ಯತೆಯನ್ನು ಗಮನಿಸಿ ಈ ವಿಧಾನವು ಲಿಂಗ ಸಂಬಂಧಗಳ ರಚನಾತ್ಮಕ ಕಾರಣಗಳ ಬಗೆಗೆ ಆಧಾರವಾಗಿರುವ ಊಹಾಪೋಹಗಳು ಅನೇಕ ಅಭಿವೃದ್ಧಿಶೀಲ ದೇಶಗಳ ಸುಧಾರಣೆಗೆ ಸ್ವೀಕಾರಾರ್ಹವಲ್ಲ ಎಂದು ತೋರಿಸಿದೆ ಎಂದು ಹೇಳುತ್ತಾರೆ. ಉದಾರವಾದಿ ಸ್ತ್ರೀವಾದದಲ್ಲಿ ಹಲವಾರು ನ್ಯೂನ್ಯತೆಗಳು ಕಂಡುಬಂದರೂ ಮಹಿಳೆಯರನ್ನು ಪರಿಗಣನೆಗೆ ತೆಗೆದುಕೊಂಡು ಅಭಿವೃದ್ಧಿಯನ್ನು ವಿಭಿನ್ನ ರೀತಿಯಲ್ಲಿ ಕಾಣಲು ದಾರಿ ಮಾಡಿಕೊಟ್ಟಿತು.

**ತೀವ್ರವಾದಿ ಸ್ತ್ರೀವಾದ:**

ಮಾರ್ಕ್ಸ್‌ವಾದಿ ಸಂಪ್ರದಾಯದಲ್ಲಿ ಜಂಡರ್ ವಿಶ್ಲೇಷಣೆಯ ಕೊರತೆಯದ ಕಾರಣದಿಂದ ೧೯೬೦ರ ಅಂತ್ಯದಲ್ಲಿ ಹಾಗೂ ೧೯೭೦ರ ಆರಂಭದಲ್ಲಿ ತೀವ್ರವಾದಿ ಸ್ತ್ರೀವಾದದ ಬೆಳವಣಿಗೆಗೆ ಕಾರಣವಾಯಿತು. ಕಾನೂನು, ಮತಚಲಾಯಿಸುವಿಕೆ ಮತ್ತು ಉದ್ಯೋಗದಿಂದ ಮಹಿಳೆಯರ ಶೋಷಣೆಯಲ್ಲುಂಟಾದ ಅಲ್ಪವ್ಯತ್ಯಾಸವನ್ನು ಉದಾರವಾದಿ ಸ್ತ್ರೀವಾದಿಗಳು ಉಂಟುಮಾಡಿದುದರ ಪರಿಣಾಮವಾಗಿ ತೀವ್ರವಾದಿ ಸ್ತ್ರೀವಾದವು ಬೆಳವಣಿಗೆ ಹೊಂದಿತು. ಅರವತ್ತರ ದಶಕದ ಕೊನೆಯಲ್ಲಿ ಬಂದ ಸ್ತ್ರೀವಾದದ ಎರಡನೆಯ ಅಲೆಯ ಜೊತೆ, ಪಶ್ಚಿಮದಲ್ಲಿ ಹುಟ್ಟಿಕೊಂಡ ಹೊಸ ಮಹಿಳಾ ವಿಮೋಚನಾ ಚಳುವಳಿಯೊಂದಿಗೆ ಈ ಸ್ತ್ರೀವಾದದ ಉಗಮವಾಯಿತು.

ಜೈವಿಕ ಭಿನ್ನತೆಯೇ ಲಿಂಗಸಮಾನತೆಗೆ ಕಾರಣ ಎಂಬ ವಾದವನ್ನು ಈ ಸ್ತ್ರೀವಾದ ಖಂಡಿಸುತ್ತದೆ. ಜೈವಿಕ ಮತ್ತು ಮನೋವೈಜ್ಞಾನಿಕ ಲಕ್ಷಣಗಳಲ್ಲಿ ಕಂಡುಬರುವ ವ್ಯತ್ಯಾಸವೇ ಸ್ತ್ರೀ ಪುರುಷರ ನಡುವಿನ ಭಿನ್ನತೆಗೆ ಕಾರಣ ಎಂಬುದು ಮಿಥ್ಯೆ ಎಂದು ಹೇಳುತ್ತದೆ. ಸ್ತ್ರೀ ಪುರುಷರ ನಡುವಿನ ಘರ್ಷಣೆ ಸಮಾಜದ ಒಂದು ವಿಪರ್ಯಾಸ ಇದಕ್ಕೆ ಪುರುಷ ಶಕ್ತಿಯೇ ಮೂಲಾಧಾರ. ಮಹಿಳೆಯ ತುಳಿತಕ್ಕೆ ಕಾರಣವಾಗುವ ಪುರುಷರನ್ನು ವೈರಿಗಳೆಂದು ಭಾವಿಸುತ್ತದೆ. ತಾಯ್ತನವೇ ಮಹಿಳೆಯ ಶೋಷಣೆಯ ಮೂಲ. ಅವಳ ಜೈವಿಕ ಕ್ರಿಯೆಗಳ ಮೇಲೆ ನಿಯಂತ್ರಣ ಹೇರುವುದರ ಮೂಲಕ ಅವಳ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವ ಬೆಳವಣಿಗೆಯನ್ನು ಕುಂಠಿತಗೊಳಿಸಲಾಗುತ್ತದೆ. ಲಿಂಗ ತಾರತಮ್ಯವನ್ನು ವಿವಾಹ, ಕುಟುಂಬ, ವ್ಯವಸ್ಥೆ, ಲಿಂಗಾಧಾರಿತ ಶ್ರಮವಿಭಜನೆ ಮತ್ತು ಸಾಮಾಜಿಕ ಕಟ್ಟುಪಾಡುಗಳ ಮೂಲಕ ನಡೆಸಿಕೊಂಡು

ಹೋಗಲಾಗುತ್ತದೆ. ಪುರುಷ ಪ್ರಧಾನತೆಯ ಮೂಲ ಸ್ತ್ರೀ–ಪುರುಷರ ನಡುವಿನ ಜೈವಿಕ ಭಿನ್ನತೆಯಲ್ಲಿದೆ ಎಂದು ಹೇಳುವುದರ ಮೂಲಕ ಸಮಾಜದ ಎಲ್ಲಾ ವ್ಯವಸ್ಥೆ, ಸ್ತರಗಳಲ್ಲೂ ಪುರುಷರು ಮಹಿಳೆಯರನ್ನು ಆಳುತ್ತಾ ಬಂದಿದ್ದಾರೆ ಎಂದು ಹೇಳುತ್ತದೆ. ಲಿಂಗ ಅಸಮಾನತೆ ಮತ್ತು ಸ್ತ್ರೀ ಶೋಷಣೆಯ ಮೂಲ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳು. ಈ ಮೌಲ್ಯಗಳು ಯಾವಾಗಲೂ ಪುರುಷರ ಪರವಾಗಿರುತ್ತವೆ. ಕುಟುಂಬವು ಪುರುಷ ಪ್ರಧಾನ ವ್ಯವಸ್ಥೆಯ ಒಂದು ಅಂಗವಾಗಿ ಮಹಿಳೆಯರನ್ನು ಲೈಂಗಿಕವಾಗಿ, ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ತುಳಿಯುತ್ತದೆ. ಮಾನವ ಸಮಾಜದಲ್ಲಿ ಕಂಡುಬರುವ ಬೇರೆಲ್ಲ ತುಳಿತ ಮತ್ತು ಶೋಷಣೆಗಳಿಗಿಂತ ಮುಂಚೆ ಅಸ್ತಿತ್ವಕ್ಕೆ ಬಂದಿದ್ದು ಪುರುಷ ಪ್ರಧಾನತೆ, ಇದು ಪುರುಷರ ದೌರ್ಜನ್ಯ ಮತ್ತು ನಿಯಂತ್ರಣಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಎಂದು ಹೇಳುತ್ತದೆ.

ಪುರುಷ ಪ್ರಧಾನತೆಯು ಸಾರ್ವತ್ರಿಕವಾದುದು ಎಂದು ಪರಿಗಣಿಸಿ ಮಾನವ ಸಂಬಂಧಗಳಲ್ಲಿರುವ ಸಾಂಸ್ಕೃತಿಕ ಭಿನ್ನತೆ ಮತ್ತು ಐತಿಹಾಸಿಕ ವಿಶ್ಲೇಷಣೆಯನ್ನು ಕಡೆಗಣಿಸುತ್ತದೆ. ಪುರುಷರ ಜೈವಿಕತೆ ಹಾಗೂ ಪುರುಷ ಪ್ರಧಾನತೆಗೂ ಸಂಬಂಧ ಕಲ್ಪಿಸುತ್ತದೆ. ಮಹಿಳೆಯರ ಮೇಲೆ ಅತ್ಯಾಚಾರ ಮಾಡುವ ಪುರುಷರ ಅರ್ಹತೆಯನ್ನು ಸಮರ್ಥಿಸಿಕೊಳ್ಳುವುದನ್ನು ಖಂಡಿಸುತ್ತದೆ. ಜೈವಿಕ ಸಂತಾನೋತ್ಪತ್ತಿಗೆ ಬದಲು ತಾಂತ್ರಿಕ ಸಂತಾನೋತ್ಪತ್ತಿ ವಿಧಾನವನ್ನು ಅಳವಡಿಸಿಕೊಂಡು ಮಕ್ಕಳನ್ನು ಪಡೆಯುವ ಹಕ್ಕು ಸಂಪೂರ್ಣವಾಗಿ ಸ್ತ್ರೀಗೆ ಸಿಕ್ಕರೆ ಅವಳ ಶೋಷಣೆ ಕೊನೆಗೊಳ್ಳುತ್ತದೆ ಎನ್ನುತ್ತದೆ. ಪುರುಷ ಪ್ರಧಾನತೆಯನ್ನು ಪುರುಷರಿಗೆ ಉನ್ನತ ಅಧಿಕಾರ ಮತ್ತು ಅಧಿಕಾರ ಸವಲತ್ತುಗಳನ್ನು ನೀಡುವ ವ್ಯವಸ್ಥೆಯೆಂದು ವ್ಯಾಖ್ಯಾನಿಸುತ್ತದೆ.

ಪ್ರಸ್ತುತ ಪದ್ಧತಿಯೊಳಗಿನ ರಾಜಕೀಯ ಕ್ರಮದ ಕುರಿತು ಸಂಶಯವನ್ನು ಈ ವಿಧಾನವು ವ್ಯಕ್ತಪಡಿಸುತ್ತದೆ ಆದರೆ ಪಿತೃಪ್ರಧಾನತೆ ಮತ್ತು ಶ್ರೇಣಿ ರಚನೆಗೆ ಸಂಬಂಧಿಸಿದಂತೆ ವಿಷಯಗಳನ್ನು ಕಡೆಗಣಿಸುವ ಸಾಂಸ್ಕೃತಿಕ ಬದಲಾವಣೆಯನ್ನು ಬೆಂಬಲಿಸುತ್ತದೆ. ಆದ್ದರಿಂದ ಈ ಸ್ತ್ರೀವಾದವು ಪುರುಷ ಹಾಗೂ ಮಹಿಳೆಯ ನಡುವಿನ ಅಸಮಾನತೆಯ ಪಿತೃಪ್ರಧಾನ ಬೇರುಗಳ ಕುರಿತು ಅಥವಾ ಇನ್ನೂ ನಿಖರವಾಗಿ ಹೇಳಬೇಕೆಂದರೆ ಪುರುಷರಿಂದ ಸ್ತ್ರೀಯರ ಸಾಮಾಜಿಕ ಶೋಷಣೆ ಕುರಿತು ಒತ್ತು ನೀಡುವ ತತ್ವವಾಗಿದೆ. ಆದರೆ ಈ ದೃಷ್ಟಿಕೋನವು ಹಲವು ನ್ಯೂನ್ಯತೆಗಳಿಂದ ಕೂಡಿದೆ. ಇದು ವರ್ಗ, ಜಾತಿ ಭೇದಗಳ ಕುರಿತು ಚರ್ಚಿಸುವುದಿಲ್ಲ. ಮಹಿಳೆಯರಲ್ಲಿರುವ ಭಿನ್ನಾಭಿಪ್ರಾಯಗಳಿಗೆ ಸ್ಪಂದಿಸುವುದಿಲ್ಲ. ಲಿಂಗಾಧಾರಿತ ಶ್ರಮವಿಭಜನೆಗಳು ಮತ್ತು ಆರ್ಥಿಕ ಶ್ರಮವಿಭಜನೆಗಳಿಗೆ ಸಂಬಂಧ ಕಲ್ಪಿಸುವುದಿಲ್ಲ. ಲಿಂಗ ವ್ಯವಸ್ಥೆಯ ಸಮಂಜಸತೆಯನ್ನು ಒಪ್ಪಿಕೊಳ್ಳುವುದಿಲ್ಲ ಆದರೆ ಲಿಂಗವರ್ಗೀಕರಣವನ್ನು ಬಳಸುತ್ತಾರೆ. ಮಹಿಳೆಯರಲ್ಲೆನಾದರೂ ನಕರಾತ್ಮಕ ಮನೋಭಾವನೆಗಳು, ನಡವಳಿಕೆಗಳು ಅಥವಾ ಮಾನಸಿಕ ದ್ವಂದ್ವಗಳು ಇವೆಯೇ ಎಂದು ಪ್ರಶ್ನಿಸುವುದಿಲ್ಲ. ಕುಟುಂಬವೇ ಮಹಿಳೆಯರ ತುಳಿತದ ಕೇಂದ್ರಬಿಂದುವಾಗಿರುವುದರಿಂದ ಕುಟುಂಬ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕೆಂದು ಹೇಳುತ್ತದೆ ಆದರೆ ಇದು ವಾಸ್ತವಕ್ಕೆ ದೂರವಾದುದು. ವೇತನವು ಸೇರಿದಂತೆ ಇತರ ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟ ಹೋರಾಟಗಳು ಕೇವಲ ಜನಸಂಘಟನೆಗಳಾಗಿರುತ್ತವೆ. ಅವು ಸಂಪೂರ್ಣವಾಗಿ ಪುರುಷರ ಅಧೀನದಲ್ಲಿರುವುದರಿಂದ ವಾಸ್ತವವಾಗಿ ಸ್ತ್ರೀಪರವಾಗಿರುವುದಿಲ್ಲ ಎಂದು ಅಭಿಪ್ರಾಯಪಡುತ್ತದೆ. ಸ್ತ್ರೀವಾದಿ ಅರಿವನ್ನು ಮೂಡಿಸುವ ಚರ್ಚೆಗಳಲ್ಲಿ ಲೈಂಗಿಕತೆ ಹಾಗೂ ದೌರ್ಜನ್ಯಕ್ಕೆ ಹೆಚ್ಚು ಒತ್ತು ನೀಡುತ್ತದೆ. ಈ ದೃಷ್ಟಿಕೋನವು ಚರಿತ್ರಾರ್ಹವಲ್ಲದ್ದು ಮತ್ತು ಜನಾಂಗೀಯ ಕೇಂದ್ರಿತವಾದದ್ದು. ಭಾರತಕ್ಕೆ ಸಂಬಂಧಿಸಿದಂತೆ ಜಂಡರ್ ಮತ್ತು ಅಭಿವೃದ್ಧಿಯ ಸಮಸ್ಯೆ ಕುರಿತಂತೆ ತೀವ್ರವಾದಿ ಸ್ತ್ರೀವಾದವು ಸಾಕಷ್ಟು ಮಾಹಿತಿಯನ್ನು ನೀಡಿರುವುದಿಲ್ಲ. ಸ್ಟಾಂಪ್ (೧೯೮೯)ರ ಪ್ರತಿಪಾದನೆಯಂತೆ ಈ ದೃಷ್ಟಿಕೋನವು ಭಾರತಕ್ಕೆ ಸಂಬಂಧಿಸಿದಂತೆ ಸೂಕ್ತವಲ್ಲದಿದ್ದರೂ ಮಹಿಳೆಯರ ಶೋಷಣೆಯನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ ಎನ್ನುತ್ತಾರೆ.

**ಸಮಾಜವಾದಿ ಸ್ತ್ರೀವಾದ**

ಸಮಾಜವಾದಿ ಸ್ತ್ರೀವಾದವು ಉದಾರವಾದ ಮತ್ತು ಮಾರ್ಕ್ಸ್‌ವಾದಗಳ ನಿಲುವುಗಳನ್ನು ಇಟ್ಟುಕೊಂಡು ಬೆಳೆದಂತ ಸ್ತ್ರೀವಾದವಾಗಿದೆ. ತೀವ್ರಗಾಮಿ ಸ್ತ್ರೀವಾದದಿಂದ ಕೂಡ ಪ್ರಭಾವಗೊಂಡಿದೆ. ಇತರ ಸ್ತ್ರೀವಾದಗಳು ಒಂದೊಂದು ಅಂಶಕ್ಕೆ ಒತ್ತುಕೊಟ್ಟು ಅದರ ಮೂಲಕ ಸ್ತ್ರೀ ಶೋಷಣೆಯ ಮೂಲವನ್ನು ಹುಡುಕಲು ಯತ್ನಿಸಿದವು. ಆದರೆ ಈ ಎಲ್ಲಾ ಅಂಶಗಳು ಸೇರಿದ ಒಂದು ಸಮಗ್ರ ದೃಷ್ಟಿಕೋನದಿಂದ ಲಿಂಗತಾರತಮ್ಯವು ಸೇರಿದಂತೆ ಸ್ತ್ರೀ ಶೋಷಣೆಗೆ ಕಾರಣವನ್ನು ಹುಡುಕುವ ಪ್ರಯತ್ನವಾಗಬೇಕೆಂದು ಅರಿತ ಕೆಲವು ಸ್ತ್ರೀವಾದಿಗಳು ಸಮಾಜವಾದಿ ಸ್ತ್ರೀವಾದವನ್ನ ಹುಟ್ಟು ಹಾಕಿದರು.

ಉದಾರವಾದ, ತೀವ್ರವಾದಿ ಮತ್ತು ಮಾರ್ಕ್ಸ್‌ವಾದವನ್ನು ಟೀಕಿಸುವ ಸಮಾಜವಾದಿ ಸ್ತ್ರೀವಾದವು ಈ ಮೂರು ನಿಲುವುಗಳು ಸರಿಯೆನಿಸಿದರೂ ಮಹಿಳಾ ಶೋಷಣೆಯ ವಿಚಾರ ಇವುಗಳನ್ನು ಮೀರಿದ್ದು ಎಂದು ಹೇಳುತ್ತದೆ. ವರ್ಗಬೇಧದ ಜೊತೆಗೆ ಲಿಂಗಬೇಧವನ್ನು ಮಹಿಳೆಯರ ಪರಾಧೀನತೆಗೆ ಮುಖ್ಯಕಾರಣವೆಂದು ಗುರುತಿಸುತ್ತದೆ. ಲಿಂಗವ್ಯವಸ್ಥೆ ಸಂಬಂಧಗಳನ್ನು ಅಧಿಕಾರಕ್ಕೆ ಸಂಬಂಧಪಟ್ಟ ಸಂಬಂಧಗಳೆಂದು ಅರ್ಥಮಾಡಿಕೊಳ್ಳುವುದರಿಂದ ಸಮಾಜದ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಅವುಗಳನ್ನು ವರ್ಗ, ಜಾತಿ ಮತ್ತು ಇತರ ಅಧಿಕಾರ ಸಂಬಂಧಿಗಳ ಜೊತೆಯೇ ವಿಶ್ಲೇಷಿಸಬೇಕೆಂದು ಹೇಳುತ್ತದೆ. ಮಹಿಳೆಯರಿಗೆ ಕಡಿಮೆ ವೇತನ, ಭವಿಷ್ಯದಲ್ಲಿ ಉದ್ಯೋಗ ಭರವಸೆಯಲ್ಲದ ಕೆಲವು ಕೆಲಸಗಳನ್ನು ನೀಡುವುದರಿಂದ ಉದ್ಯೋಗ ಕ್ಷೇತ್ರದಲ್ಲೂ ಲಿಂಗಾಧಾರಿತ ಶ್ರಮವಿಭಜನೆಯು ಮಹಿಳೆಯರ ವಿರುದ್ಧವಾಗಿ ಕೆಲಸ ಮಾಡುತ್ತದೆ. ಈಗಿರುವ ವ್ಯವಸ್ಥೆಯಲ್ಲಿ ಸ್ತ್ರೀವಿಮೋಚನೆ ಅಥವಾ ಸ್ತ್ರೀ ತುಳಿತವನ್ನು ಕೊನೆಗೊಳಿಸುವುದು ಸಾಧ್ಯವಿಲ್ಲ. ಎಲ್ಲಾ ರೀತಿಯ ತುಳಿತಗಳ ವಿರುದ್ಧ ಹೋರಾಡಬೇಕು ಎನ್ನುತ್ತದೆ. ಹೊಸ ಸಮಾಜವನ್ನು ಕಟ್ಟುವಲ್ಲಿ ಸ್ತ್ರೀ ಪುರುಷರಿಬ್ಬರೂ ಒಟ್ಟಾಗಿ ಸೇರಿ ಕೆಲಸ ಮಾಡಬೇಕು. ಎಲ್ಲಾ ಪ್ರಕಾರದ ಅನ್ಯಾಯಗಳನ್ನ ಹೋಗಲಾಡಿಸಲು ಎಲ್ಲಾ ವರ್ಗದ ಮಹಿಳೆಯರು ಒಗ್ಗೂಡಬೇಕು ಎನ್ನುತ್ತದೆ. ಖಾಸಗಿ ಆಸ್ತಿಯ ಪರಿಕಲ್ಪನೆ ಹುಟ್ಟುವುದಕ್ಕೆ ಮುಂಚೆಯೇ ಪುರುಷ ಪ್ರಧಾನತೆ ಇತ್ತು ಎಂದು ನಂಬುತ್ತದೆ. ಆದರೆ ಖಾಸಗಿ ಆಸ್ತಿ ಹೋದ ತಕ್ಷಣ ಪುರುಷ ಪ್ರಧಾನತೆ ಅಳಿಸಿ ಹೋಗುತ್ತದೆ ಎಂಬ ಅರ್ಥವಲ್ಲ ಎಂದು ಅಭಿಪ್ರಾಯಪಡುತ್ತದೆ.

ಲಿಂಗಾಧಾರಿತ ಶ್ರಮವಿಭಜನೆಯ ಮೂಲ ಮತ್ತು ಸಮಾಜದ ವಿವಿಧ ಸಂಸ್ಥೆಗಳಲ್ಲಿ ಕಂಡುಬರುವ ಮಹಿಳೆಯರ ಪರಾಧೀನತೆಯನ್ನು ಪ್ರಶ್ನಿಸುತ್ತದೆ. ಪುರುಷ ಪ್ರಧಾನತೆ ಮಹಿಳಾ ಸಬಲೀಕರಣಕ್ಕೆ ದೊಡ್ಡ ಅಡ್ಡಿಯಾಗಿದೆ ಎಂದು ಹೇಳುತ್ತದೆ. ಸ್ತ್ರೀ ಪುರುಷರ ರೂಢಿಬದ್ಧ ಮನೋಭಾವನೆಗಳನ್ನು ಬೆಳೆಸುವಲ್ಲಿ ಶಿಕ್ಷಣ ಮತ್ತು ಸಮೂಹ ಮಾಧ್ಯಮದ ಪಾತ್ರವನ್ನು ಗುರುತಿಸುತ್ತದೆ. ಜೊತೆಗೆ ಶಾಲಾ ಪಠ್ಯಕ್ರಮವನ್ನು ಬದಲಾಯಿಸುವ ಅಗತ್ಯವನ್ನು ಎತ್ತಿಹಿಡಿಯುತ್ತದೆ. ಸರ್ಕಾರ ಮತ್ತು ಕಾರ್ಮಿಕ ಸಂಘಗಳು ಒಂದಾಗಿ ಲೈಂಗಿಕ

ಮನೋಭಾವ ಮತ್ತು ಪದ್ಧತಿಗಳ ವಿರುದ್ಧ ಹೋರಾಟಬೇಕೆಂದು ಹೇಳುತ್ತದೆ. ಬಂಡವಾಳಶಾಹಿ ವಿರುದ್ಧ ಹೋರಾಡುವುದು ಮತ್ತು ಸಮಾಜವಾದಿ ಸಮಾಜವನ್ನು ಹೇಗೆ ಕಟ್ಟುವುದು ಎಂದು ತಿಳಿಸುವ ಸಿದ್ಧಾಂತಗಳನ್ನು ಸ್ವೀಕರಿಸಿದರಷ್ಟೇ ಸಾಲದು ಸ್ತ್ರೀ ಪುರುಷರಿಗೆ ಒಂದೇ ರೀತಿಯ ಕೌಶಲ್ಯ ಮೌಲ್ಯ ನೀಡುವ ಬದಲಿ ಸಂಬಂಧವನ್ನು ಹುಟ್ಟುಹಾಕಬೇಕೆಂದು ಪ್ರತಿಪಾದಿಸುತ್ತದೆ. ಮಹಿಳಾ ವಿಮೋಚನಾ ಹೋರಾಟಕ್ಕೆ ಸ್ವಾಯತ್ತ ಮಹಿಳಾ ಸಂಘಟನೆಗಳ ಸ್ಥಾಪನೆಯ ಅಗತ್ಯವಿದೆಯೆಂದು ನಂಬುತ್ತದೆ, ಈ ಸಂಘಟನೆಗಳು ಮಹಿಳೆಯರನ್ನು ರಾಜಕೀಯಕರಣಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಮಹಿಳೆಯರು ವಿಚಾರ ಮಾಡಲು ಅವಕಾಶ ಮಾಡಿಕೊಡುತ್ತದೆ. ಮಹಿಳೆಯರ ಜೀವನದ ಮೇಲೆ ಪರಿಣಾಮ ಬೀರುವ ಸಾಮಾಜಿಕ ರಾಜಕೀಯ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ಮಹಿಳೆಯರ ಬೇಡಿಕೆಗಳ ಪರವಾಗಿ ವಾದಿಸಲು ಒಂದು ಚೌಕಟ್ಟನ್ನು ಹಾಕಿ ಕೊಡುತ್ತದೆ.

ಸಮಾಜವಾದಿ ಸ್ತ್ರೀವಾದಿ ವಿಶ್ಲೇಷಣೆಯ ಒಂದು ಪ್ರಮುಖ ಕೊಡುಗೆ ಎಂದರೆ ಮಹಿಳಾ ಕಾರ್ಮಿಕರ ಸ್ವರೂಪವನ್ನು ವಿವರಿಸುವ ಪ್ರಯತ್ನ ಮಾಡಿದುದು ಎಂದು ಹಾರ್ಡಿಂಗ್ (೧೯೮೭) ಹೇಳಿದ್ದಾರೆ. ಗ್ರೇ (೧೯೮೨) ಯವರು ಆರಂಭದ ಪ್ರಯತ್ನವು ಮನೆಗೆಲಸವು ಬಂಡವಾಳಶಾಹಿಗೆ ಅವಶ್ಯಕವಾಗಿ ಲಾಭವಾಗಿರುವುದರಿಂದ ಅವರಿಗೆ ವೇತನ ನೀಡುವುದು ಅವಶ್ಯಕವೆಂದು ಆಗ್ರಹ ಮಾಡಿದರು. ಈ ವಿಚಾರಗಳು ಮನೆಗೆಲಸ ಸಹಜವಲ್ಲ/ನೈಸರ್ಗಿಕವಲ್ಲ ಆದರೆ ಸಾಮಾಜಿಕವೆನ್ನುವ ಜಾಗೃತಿ ಮೂಡಿಸಿತು. ಆದ್ದರಿಂದ ಈ ಪರಿಕಲ್ಪನೆಯು ಸಮರ್ಪಕವಾಗಿ ನಿರಂತರ ಸ್ತ್ರೀವಾದ ಹೋರಾಟಕ್ಕೆ ಒಂದು ವೇದಿಕೆಯನ್ನು ಕಲ್ಪಿಸಿತು. ಮಬಿಲಿನಿ (ಒಭುಟುಟಿಥು) (೧೯೯೧) ಗೃಹದ ಶ್ರಮವನ್ನು ಗೃಹದ ಉತ್ಪಾದನಾ ಕ್ರಮದ ಪರಿಸ್ಥಿತಿಯಲ್ಲಿ ಮಾತ್ರ ಅರ್ಥಮಾಡಿಕೊಳ್ಳಬಹುದು ಮತ್ತು ಪುರುಷರು ಸ್ತ್ರೀಯರನ್ನು ನಿಯಂತ್ರಿಸುವುದರಲ್ಲಿ ಅವರ ಶ್ರಮದ ಲಾಭವನ್ನು ಪಡೆದಿರುತ್ತಾರೆ ಎನ್ನುತ್ತಾರೆ. ಮುರ್ರೇ (೧೯೮೧) ಯವರು ಕಾರ್ಮಿಖ ಮಾರುಕಟ್ಟೆಯಲ್ಲಿ ಹಂಚಿಕೆಯನ್ನು ಜಂಡರ್ ಜೀವನೋಪಾಯದಿಂದ ಅಥವಾ ವೃತ್ತಿಯಿಂದ ವಿಶ್ಲೇಷಿಸುತ್ತಾರೆ. ಬಂಡವಾಳಶಾಹಿ ಪದ್ಧತಿಯನ್ನು ಅಂತರ್ಗತವಾಗಿ ನಿರಾಕರಿಸುವುದಾಗಿದೆಂದು ಅವರು ವಿವರಿಸಿದ್ದಾರೆ.

ವಿವಿಧ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸ್ಥಿತಿಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನದಿಂದ ಮಹಿಳೆಯರ ಅಧೀನತೆಯ ವಿವರಣೆಯ ಪ್ರತಿಪಾದನೆಯು ದುರ್ಬಲವಾಗಿದೆ ಎಂದು ಜೋರ್ಡಾನ್ (೧೯೯೬) ಹೇಳುತ್ತಾರೆ. ಆದರೂ ಜಂಡರ್ ಸಮಸ್ಯೆಗಳ ಕುರಿತ ಮಹತ್ವದ ಚೌಕಟ್ಟನ್ನು ನೀಡಿದೆ ಎಂದು ಹಾಕೋಟ್ (೧೯೯೪) ಪ್ರತಿಪಾದಿಸುತ್ತಾರೆ. ಇದಕ್ಕೆ ಸಂಬಂದಿಸಿದಂತೆ ಉತ್ಪಾದನೆ ಮತ್ತು ಸಂತಾನೋತ್ಪತ್ತಿ ಸಂಬಂಧದ ಪರಿಶೀಲನೆಯ ಅಗತ್ಯವಿದೆ ಕಾರಣ ಕಾಲಾನುಕ್ರಮದಲ್ಲಿ ವಿಶ್ವ ಆರ್ಥಿಕ ಪದ್ಧತಿಯಲ್ಲಿ ಬದಲಾವಣೆ ಹೊಂದುತ್ತಿರುತ್ತದೆ. ಮೋಸರ್ (೧೯೯೩) ಜಂಡರ್ ಹಾಗೂ ಅಭಿವೃದ್ಧಿ ಯೋಜನೆಗಳಲ್ಲಿ ಸ್ತ್ರೀವಾದಿ ಸಿದ್ಧಾಂತಗಳ ಜ್ಞಾನದ ಅಗತ್ಯವಿದೆ ಎನ್ನುತ್ತಾರೆ. ಈ ಅಧ್ಯಯನಕ್ಕೆ ಈ ವಿಷಯವು ಸಂಬಂಧಿಸಿರುತ್ತದೆ ಕಾರಣ ಬಳ್ಳಾರಿಯಲ್ಲಿ ಪಿತೃಪ್ರಧಾನತೆ ಮತ್ತು ಲಿಂಗಸಮಾನತೆಯಿರುವುದರಿಂದ ಈ ಸಮಸ್ಯೆಗಳು ವಲಸೆಯಲ್ಲಿ ಅಂರ್ತಗತವಾಗಿರುತ್ತವೆ. ಸ್ತ್ರೀವಾದ ಕುರಿತ ಪ್ರಮುಖ ಚರ್ಚೆಯು ಎಳೆಗಳು ಅಭಿವೃದ್ಧಿಯ ಅನುಷ್ಠಾನ ಮತ್ತು ವಲಸೆ ಸಮಸ್ಯೆಗಳ ಮೇಲೆ ಕ್ರಮೇಣವಾಗಿ ಪರಿಣಾಮ ಬೀರಿತು. ಸಿದ್ಧಾಂತಗಳಿಗೆ ಆಧಾರವಾಗಿರುವ ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸಮಾಜದಲ್ಲಿ ಪುರುಷರಿಗೆ ಸಂಬಂಧಿಸಿದಂತೆ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸುವ ದೃಷ್ಟಿಯಿಂದ ಮಹಿಳೆಯರ ಸ್ಥಾನ ಕುರಿತಾದ ಪ್ರಬಲ ಅಭಿಪ್ರಾಯಗಳಿಗೆ ಸವಾಲೆಸೆಯ ಬೇಕಾಗಿದೆ. ಇದನ್ನು ಸ್ತ್ರೀವಾದಿ ಸಿದ್ಧಾಂತಗಳು ಮತ್ತು ಜಂಡರ ವಿಶ್ಲೇಷಣೆಯ ಸುಸಂಯೋಜನಾತ್ಮಕ ವಿಧಾನದ ಮೂಲಕ ಸಾಧಿಸಿ ಗ್ರಾಮೀಣ ಕುಟುಂಬಗಳಲ್ಲಿ ವಲಸೆ ಪ್ರಭಾವದಿಂದ ಉಂಟಾಗುವ ಜಂಡರ ವ್ಯತ್ಯಾಸಗಳನ್ನು ಬಹಿರಂಗಪಡಿಸಬಹುದು ಎಂದು ಹೇಳಬಹುದು.

## ಪರಾಮರ್ಶನ ಗ್ರಂಥಗಳು


೧. ಇಂದಿರಾ. ಆರ್ : ೧೯೯೫, ಸ್ತ್ರೀವಾದಿ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ಮೈಸೂರು.
೨. ಇಂದಿರಾ. ಆರ್ : ೨೦೦೫, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ.
೩. ಉಷಾ. ಎಂ : ೨೦೦೧, ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಪ್ರಸಾರಾಂಗ, ಕನ್ನಡ. ವಿ. ವಿ. ಹಂಪಿ.
೪. ಕೇಶವಶರ್ಮ. ಕೆ : ೨೦೦೦, ಸ್ತ್ರೀ ಮತ್ತು ರಾಜಕಾರಣ, ಪ್ರಸಾರಾಂಗ ಕನ್ನಡ, ವಿವಿ. ಹಂಪಿ.
೫. ಗಾಯತ್ರಿ. ಎನ್ : ೨೦೦೦, ಪಶ್ಚಿಮದ ಸ್ತ್ರೀವಾದಿ ಪಂಥಗಳು, ಪ್ರಸಾರಾಂಗ, ಕನ್ನಡ ವಿವಿ. ಹಂಪಿ.
೬. ಗಾಯತ್ರಿ ಎನ್: ೧೯೯೬, ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
೭. ಚಂದ್ರ ಪೂಜಾರಿ. ಎಂ: ೨೦೦೫, ಸಮಾಜ ಸಂಶೋಧನೆ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ.
೮. ಚಂದ್ರಶೇಖರ್.ಬಿ.ಎಸ್ : ೨೦೦೧, ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಪ್ರಸಾರಾಂಗ, ಕನ್ನಡ ವಿವಿ, ಹಂಪಿ.
೯. ಚಂದ್ರಶೇಖರ್. ಬಿ. ದಾಮ್ಲೆ : ೧೯೯೭, ಭಾರತೀಯ ಸಾಮಾಜಿಕ ಅಧ್ಯಯನ, ಜಗನ್ನಾಥ ಪ್ರಕಾಶನ, ಬೆಂಗಳೂರು.
೧೦. ಛಾಯಾದಾತರ್, ಸರಸ್ವತಿ ರಿಸಬೂಡ (ಅನು) : ೧೯೯೨, ಸ್ತ್ರೀ–ಪುರುಷ, ಇಳಾ ಪ್ರಕಾಶನ, ಬೆಂಗಳೂರು.
೧೧. ಮಧುಕೀಶ್ವರ್(ಮೂಲ), ಮೀರಾ. ಎಲ್.ಜಿ (ಅನು) : ೧೯೯೭, ಮಾನುಷಿಯ ಮಾತು, ಅಕ್ಷರ ಪ್ರಕಾಶನ ಹೆಗ್ಗೋಡು.
೧೨. ಮನುಚಕ್ರವರ್ತಿ ಎನ್ : ೧೯೯೩, ಭಾರತೀಯ ಸ್ತ್ರೀವಾದ, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ).
೧೩. ವಿಜಯಾ ದಬ್ಬೆ : ೧೯೮೯, ಮಹಿಳೆ ಸಾಹಿತ್ಯ ಮತ್ತು ಸಮಾಜ, ರಚನಾ ಪ್ರಕಾಶನ, ಮೈಸೂರು.
೧೪. ಶ್ರೀಮತಿ ಎಚ್.ಎಸ್: ಚಹರೆ, ಇಳಾ ಪ್ರಕಾಶನ, ಬೆಂಗಳೂರು.
೧೫. ಶ್ರೀಮತಿ ಎಚ್.ಎಸ್: ೨೦೦೪, ಹೆಣ್ಣು ಹೆಂಗಸು, ಬಾಲ್ಯದ ಕೆರೆ ಪ್ರಕಾಶನ, ಮಂಡ್ಯ
೧೬. ಹೇಮಲತಾ. ಎಚ್. ಎಂ : ೨೦೦೩, ಮಹಿಳಾ ಸಶಕ್ತೀಕರಣ, ಅಭಿರುಚಿ ಪ್ರಕಾಶನ, ಮೈಸೂರು.